

ಎಂದು ನಂಬಿ ಸೌಂದರ್ಯಪ್ರಜ್ಞೆಯನ್ನೇ ನಾವು ಮರೆಯುತ್ತೇವೆ. ಆದರೆ ಪ್ರೇಕ್ಷಕರು ಯಾವುದೇ ನೃತ್ಯದಲ್ಲೂ ಸೌಂದರ್ಯಪ್ರಜ್ಞೆಯನ್ನು ಹುಡುಕುತ್ತಾರೆ. ಅದೇ ಕಾರಣಕ್ಕಾಗಿ ಇರಬೇಕು, ಎಲ್ಲರೂ ಶಾಸ್ತ್ರೀಯ ನೃತ್ಯವನ್ನು ಆನಂದಿಸಲು ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ನಾಯಕಿಯು ಯಾವುದನ್ನು ಪ್ರಸ್ತುತಪಡಿಸುತ್ತಾಳೋ, ಅದನ್ನು ರಸಿಕರು ಅನುಸರಿಸಲು ಸಾಧ್ಯವಾಗದು. ಬದಲಾಗಿ, ಅವರೊಳಗೆ ಅದೇ ಭಾವನೆ ಸ್ಫುರಿಸಿದರೆ ಮಾತ್ರ ನೃತ್ಯವನ್ನು ಆನಂದಿಸುವುದು ಸಾಧ್ಯವಾಗುತ್ತದೆ. ಏನೇ ಇರಲಿ, ನಿಯಮಗಳಿಗೆ ಬದ್ಧರಾಗಿರುವ ಭರಾಟೆಯಲ್ಲಿ ನೃತ್ಯದ ಆಶಯಕ್ಕೆ ಭಂಗ ಬರಬಾರದು. ಅಲ್ಲಿ ಹೊಸತನದ ಪ್ರಯೋಗಕ್ಕೆ ತೊಡಕು ಸೃಷ್ಟಿಯಾಗಬಾರದು. ಉದಾಹರಣೆಗೆ, ಸ್ವಾತಿ ತಿರುನಾಳ್ ರಚನೆಯಲ್ಲಿ ಬರುವ ವಿರಹೋತ್ಕಂಟಿತ ನಾಯಿಕಾ ಭಾವದ ಪ್ರಸ್ತುತಿಗಳು ಮೋಹಿನಿಯಾಟ್ಟಂಗೆ ಹೆಚ್ಚು ಹೊಂದುತ್ತವೆ. ಆದರೆ ಮೋಹಿನಿಯಾಟ್ಟಂ ಅದನ್ನೇ ಪ್ರಸ್ತುತಪಡಿಸಬೇಕು ಎಂದು ಪಟ್ಟುಹಿಡಿಯುವುದು ಸರಿಯಲ್ಲ. ಒಂದು ಕಲಾಪ್ರಕಾರದ ಒಟ್ಟಂದವನ್ನು ಹೆಚ್ಚಿಸುವ, ವಿಸ್ತರಿಸುವ ಜವಾಬ್ದಾರಿ ಕಲಾವಿದರ ಮೇಲೆಯೇ ಇರುತ್ತದೆ.

ನಾನು ದೇಸೀ ಶೈಲಿಯ ನೃತ್ಯವನ್ನು ಹೆಚ್ಚು ಇಷ್ಟಪಡಲು ನನ್ನ ಬಾಲ್ಯವೂ ಕಾರಣವಾಗಿರಬಹುದು. ನಾನು ಕೃಷಿಪ್ರಧಾನವಾದ ಊರಿನಲ್ಲಿ ಬೆಳೆದು ಬಂದೆ. ನನ್ನ ತಂದೆ ಸಿ.ಎನ್. ರಾಮ ಪಣಿಕ್ಕರ್ ಕೃಷಿಕರಾಗಿದ್ದರು. ಉದ್ಯಮಿಯೂ ಆಗಿದ್ದರು. ಭತ್ತ ಮತ್ತು ತೆಂಗಿನ ಕೃಷಿಯು ನನ್ನ ಬಾಲ್ಯದ ನೆನಪುಗಳಲ್ಲಿ ಹಾಸುಹೊಕ್ಕಾಗಿದೆ. ಇಂದಿಗೂ ನನ್ನ ಕಣ್ಣ ಮುಂದೆ ಕೊಯ್ಲು ಮುಗಿದು ಅಂಗಳದಲ್ಲಿ ಗೋಪುರದಂತೆ ರಾಶಿ ಹಾಕಿದ ಭತ್ತದ ರಾಶಿಯು ಬರುತ್ತದೆ. ಹೀಗೆ ನನ್ನನ್ನು ಪ್ರಭಾವಿಸಿದ ವಿಚಾರಗಳು ನನ್ನ ಬದುಕಿನಲ್ಲಿಯೂ ಕೈಹಿಡಿದು ನಡೆಸಿವೆ. ನನ್ನ ಸುತ್ತಮುತ್ತ ನೋಡುವ ವಿಚಾರಗಳನ್ನೇ ನಾನು ನನ್ನ ನೃತ್ಯದಲ್ಲಿ ಸೆರೆಹಿಡಿಯಲು ಬಯಸುತ್ತೇನೆ. ಗುರುಗಳು ಹೇಳುತ್ತಿದ್ದರು,‘ಸಿಂಹದ ಗರ್ಜನೆ, ಕೋಗಿಲೆಯ ಕುಹೂಗಷ್ಟೇ ಮಾರುಹೋಗಬೇಡ. ಅದೇ ಮಾದರಿಯಲ್ಲಿ ಪ್ರಕೃತಿಯ ಇತರ ಸದ್ದುಗಳಿಗೂ ಕಿವಿಕೊಡುವುದನ್ನು ಕಲಿ. ಇರುವೆಯ ನಡಿಗೆ, ತಂಗಾಳಿಯ ಸದ್ದು, ಝುಂಝಾವಾತದ ನವಿರು ಅನುಭವ... ಏನೇ ಆದರೂ ಕಿವಿಯನ್ನು ತೆರೆದಿರಿಸಿ ಆಲಿಸು’ ಎಂದು. ಹದಿಹರೆಯದಲ್ಲಿ ಸ್ನೇಹಿತೆಯರೊಂದಿಗೆ ಆಡಿದ ಅಮ್ಮನಾಟ್ಟಂ, ತುಡಿಚುಕುಳಿ, ಪಂಥಾಟ್ಟಾಂ ಮುಂತಾದವುಗಳನ್ನು ನಾನು ಕೊರಿಯೊಗ್ರಫಿ ಸಂದರ್ಭದಲ್ಲಿ ನೆನಪಿಸಿಕೊಂಡು ಅಳವಡಿಸಿದ್ದೇನೆ. ಅದು ಕಲೆಯನ್ನು ಹೆಚ್ಚು ಸಮಕಾಲೀನಗೊಳಿಸಲು ನೆರವಾಗುತ್ತದೆ. ●